ಗರ್ಭಗುಡಿಯೆದುರು ಕಲ್ಲಿನಲ್ಲಿ ನಿರ್ಮಿಸಿದ ನೃತ್ಯಮಂಟಪ. ಗುಡಿಯೆದುರು ಒಂಟಿಕಲ್ಲಿನ ಧ್ವಜಸ್ತಂಭ. ಪ್ರಾಂಗಣದಲ್ಲಿ ಸುತ್ತಲೂ ಬಲಿ ನೀಡಲು ಬಲಿಪೀಠಗಳು. ಆ ಪೀಠಗಳ ಮೇಲೆ ಮೂರು ಹೊತ್ತು, ಚರು ಮತ್ತು ಒಂದು ವಿಶೇಷ ವೃಕ್ಷದ ಎಲೆಗಳನ್ನು ಕಲಸಿ ಬಲಿ ನೀಡುತ್ತಿದ್ದರು. ರಥೋತ್ಸವ ಮತ್ತು ಹಬ್ಬಹರಿದಿನಗಳಲ್ಲಿ ಪೂಜೆಯಲ್ಲದೆ, ಪಲ್ಲಕಿಯಲ್ಲಿ ಉತ್ಸವಮೂರ್ತಿಯ ಮೆರವಣಿಗೆ ಊರ ಮುಖ್ಯಬೀದಿಗಳಲ್ಲಿ ಬರುತ್ತಿತ್ತು. ಶ್ರಾವಣ ಮಾಸವಿಡೀ ಮತ್ತು ನವರಾತ್ರಿಯಲ್ಲಿ ಪೂಜೆ ಉತ್ಸವಗಳಿರುತ್ತಿತ್ತು.

ಶಿವನಿಗೆ ಬಿಟ್ಟ ಬಸವ, ಹಿಲಾಲು ಹಿಡಿಯುವವ, ದೇವದಾಸಿ, ನೈವೇದ್ಯ ತಯಾರಿಸುವವ ಎಲ್ಲ ಮಂಡಲಾಧೀಶರಿಂದ ನಿಯುಕ್ತರಾಗಿದ್ದರು. ಉತ್ಸವದಲ್ಲಿ ಪಲ್ಲಕಿ ಹೋಗುತ್ತಿರುವಾಗ ಅದರ ಪಕ್ಕದಲ್ಲಿ, ಬಟ್ಟೆಯನ್ನು ದಪ್ಪಗೆ ಸುತ್ತಿ ತಯಾರಿಸಿದ ಹಿಲಾಲು ಹಿಡಿದು, ಬೆಂಕಿಗೆ ಆಗಾಗ ತಾಮ್ರದ ಗಿಂಡಿಯಿಂದ ಎಣ್ಣೆ ಸುರಿಯುತ್ತ ದೀವಟಿಗೆಯವ ಹೋಗುತ್ತಿದ್ದ. ಕೊಂಬು ಕಹಳೆಯವರು ನಾದ ಹೊರಡಿಸುತ್ತಾ ಮುಂದಿರುತ್ತಿದ್ದರು. ದೇವದಾಸಿ ಪಲ್ಲಕಿಯ ಪಕ್ಕದಲ್ಲೆ ದೇವರಿಗೆ ಚಾಮರ ಬೀಸುತ್ತಾ ಸಾಗುತ್ತಿದ್ದಳು. ಬೆಳ್ಳಿಕೋಲು ಹಿಡಿದ ಪಾರುಪತ್ಯಗಾರರು ಮುಂದೆ ನಡೆಯುತ್ತಿದ್ದರೆ ದೇವರ ಬಸವ ಹಿಂಬಾಲಿಸುತ್ತಿತ್ತು.

ವಿಶೇಷವೆಂದರೆ ಪಾರುಪತ್ಯಗಾರರನ್ನುಳಿದು ಈ ಎಲ್ಲರಿಗೂ ದೇವಸ್ಥಾನದಿಂದ ಮಧ್ಯಾಹ್ನ ಅನ್ನ ನೀಡಲಾಗುತ್ತಿತ್ತು. ಮಧ್ಯಾಹ್ನ ಪೂಜೆಯ ಸಮಯದಲ್ಲಿ ಬಸವನನ್ನು ಎಲ್ಲಿದ್ದರೂ ಹುಡುಕಿ ತಂದು ಗುಡಿಯೆದುರು ನಿಲ್ಲಿಸಲಾಗುತ್ತಿತ್ತು. ದೇವದಾಸಿ ಚಾಮರ ಬೀಸುತ್ತಿದ್ದರೆ ಕೊಂಬು ಕಹಳೆಯವರು ಸ್ವರ ಹೊರಡಿಸುತ್ತಿದ್ದರು. ವಿಶೇಷ ದಿನಗಳಲ್ಲಿ ಅಷ್ಟಾಂಗ ಸೇವೆಯಾಗಲೇಬೇಕು. ದೇವದಾಸಿ ನೃತ್ಯಮಂಟಪದಲ್ಲಿ ನೃತ್ಯ ಮಾಡುತ್ತಿದ್ದಳು. ಪ್ರತಿನಿತ್ಯ ದೊಡ್ಡ ತಾಮ್ರದ ತಪ್ಪಲೆಯಲ್ಲಿ ಮಡಿಯಲ್ಲಿ ಅನ್ನವನ್ನು ಬೇಯಿಸಿ ನೈವೇದ್ಯಕ್ಕೆ ತಂದಿಡಲೇಬೇಕು. ಮಂಗಳಾರತಿಯಾದ ಮೇಲೆ ಅನ್ನವನ್ನು ಎಲ್ಲರಿಗೆ ಹಂಚಲಾಗುತ್ತಿತ್ತು. ನಿಗದಿಪಡಿಸಿದ ಪ್ರಮಾಣ ರಾತ್ರಿಗೂ ಅವರಿಗೆ ಸಾಕಾಗುವಷ್ಟಿತ್ತು. ಇದಲ್ಲದೆ ದೇವಸ್ಥಾನದ ಕಡೆಯಿಂದ ಅವರಿಗೆ ಭತ್ಯೆಯೂ ಇತ್ತು. ದೇವರ ಸೇವೆಯಲ್ಲಿ ಅವರ ಜೀವನ ಸಾಗುವಂತೆ ಸೌಲಭ್ಯವೇರ್ಪಡಿಸಲಾಗಿತ್ತು.

ಆ ರಥೋತ್ಸವ ಸುತ್ತಮುತ್ತಲ ಗ್ರಾಮಗಳಲ್ಲಿ ಪ್ರಸಿದ್ಧ. ಮೂಲೆಮೂಲೆಯಿಂದ ಭಕ್ತರು ಬಂದು ಭಾಗವಹಿಸುವುದು ರೂಢಿ. ಎದುರಿನ ಪುಷ್ಕರಣಿಯಲ್ಲಿ ದೇವರಿಗೆ ಅವಭೃತಸ್ನಾನ, ಧ್ವಜಾರೋಹಣ, ಬಲಿ ಎಲ್ಲ ಆಕರ್ಷಣೆ ಪಡೆದಿತ್ತು. ರಥ ರಾಜಮಾರ್ಗದಲ್ಲಿ ಸಾಗಿ ಮರಳಿ ಬಂದು ನೆಲೆ ನಿಲ್ಲುತ್ತದೆ. ಆಮೇಲೆ ದೇವಾಲಯದ ಮುಖ್ಯದ್ವಾರ ಮುಚ್ಚಿ ಒಳಗಿರುವ ಪಾರ್ವತಿ ದೇವಿ, ಹೊರಗೆ ಶಿವ, ಇಬ್ಬರ ನಡುವೆ ವಾಗ್ವಾದ ನಡೆಯುವ ಸಂಪ್ರದಾಯ. ನಂತರ ಶಿವ ಒಳಗೆ ಪ್ರವೇಶಿಸಿ ಪೂಜೆಯಾಗಬೇಕು. ಈ ಹಂತದಲ್ಲಿ ಒಂದು ವಿಶೇಷ ಸೇವೆ ಇತ್ತು. ದೇವಸ್ಥಾನದ ಪಾರುಪತ್ಯಗಾರರು ಮತ್ತು ದೇವದಾಸಿ ಇಬ್ಬರೆ ಗರ್ಭಗುಡಿಯ ಒಳಗೆ ಹೋಗಿ ಬಾಗಿಲು ಹಾಕಲಾಗುತ್ತಿತ್ತು. ಅಲ್ಲಿ ದೇವರಿಗೆ ಇಬ್ಬರೆ ವಿಶೇಷ ಸೇವೆ ಸಲ್ಲಿಸುವ ಕಾರ್ಯಕ್ರಮ ಸುಮಾರು ಅರ್ಧಗಂಟೆ ನಡೆಯುತ್ತಿತ್ತು. ಅಲ್ಲೇನು ವಿಧಿವಿಧಾನಗಳು ನಡೆಯುತ್ತವೆ ಅನ್ನುವುದರ ವಿವರ, ಇಲ್ಲಿಯವರೆಗೆ ದೇವದಾಸಿ ಮತ್ತು ಪಾರುಪತ್ಯಗಾರರನ್ನು ಬಿಟ್ಟು ಯಾರಿಗೂ ತಿಳಿದಿಲ್ಲ. ಅದು ದೇವರಹಸ್ಯ. ನಿಯಮದಂತೆ ಯಾರಿಗೂ ಹೇಳುವಂತಿಲ್ಲ.

ಆ ದೇವಸ್ಥಾನದ ಪಾರುಪತ್ಯಗಾರಿಕೆ, ಒಂದು ಮನೆತನಕ್ಕೆ ತಲತಲಾಂತರದಿಂದ ಬಂದಿತ್ತು. ಶಂಕರಪ್ಪ ಸದ್ಯದ ಪಾರುಪತ್ಯಗಾರರಾಗಿದ್ದರು. ಕೋಕಿಲಮ್ಮ ದೇವದಾಸಿಯಾಗಿ ಸೇವೆ ಸಲ್ಲಿಸುತ್ತ, ಅವಳಿಗಾಗಲೇ ಅರುವತ್ತು ಸಮೀಪಿಸುತ್ತಿತ್ತು. ರಥೋತ್ಸವವಾಗಿ ಎಂಟು ದಿನಕ್ಕೆ ಕಾಯಿಲೆಯಿಂದ ಮಲಗಿದವಳು, ತಿಂಗಳಾದರೂ ಚೇತರಿಸಿಕೊಳ್ಳದೆ ತೀರಿಕೊಂಡಳು. ಆ ಸಮಯದಲ್ಲಿ ಅವಳ ಮಗಳು ದೇವಸ್ಥಾನದಲ್ಲಿ ಚಾಮರಸೇವೆ ಮಾಡುತ್ತಾ ಪ್ರಸಾದ ತರತೊಡಗಿದವಳು ಅದನ್ನೇ ಮುಂದುವರಿಸಿದಳು. ಆಡಳಿತ ಮಂಡಳಿ ಅವಳನ್ನೆ ಒಪ್ಪಿಕೊಂಡಂತೆ ಸುಮ್ಮನುಳಿಯಿತು. ಚಂಚಲಮ್ಮ ಯಾರ ಮನಸಾದರೂ ಚಂಚಲಗೊಳ್ಳುವಂತಿದ್ದಳು. ಇಪ್ಪತ್ತರ ಪ್ರಾಯ, ತಾಯಿಯ ಅದೇ ಗೋಧಿಬಣ್ಣ. ಲವಲವಿಕೆ ಬಸಿಯುವ ಮುಖ. ಕೆತ್ತಿಟ್ಟಂತ ಅಂಗಸೌಷ್ಟವ. ಉತ್ಸವದಲ್ಲಿ ಪಲ್ಲಕಿಯ ಪಕ್ಕ ಅವಳು ಚಾಮರ ಬೀಸುತ್ತಾ ಹೋಗುತ್ತಿದ್ದರೆ ಜನರ ಕಣ್ಣೆಲ್ಲಾ ಅವಳ ಮೇಲಿರುತ್ತಿತ್ತು.

ವರ್ಷದ ರಥೋತ್ಸವ ಹತ್ತಿರ ಬಂತು. ಇನ್ನೇನು ಹತ್ತುದಿನವಿದೆ ಅನ್ನುವಾಗ ಶಂಕರಪ್ಪ ತನ್ನ ತೋಟದಲ್ಲಿ ಕಾಲುವೆಗೆ ಜಾರಿಬಿದ್ದು ಸೊಂಟಕ್ಕೇ ಪೆಟ್ಟು ತಗುಲಿತ್ತು. ರಥೋತ್ಸವವಿರಲಿ; ಓಡಾಡುವಂತಾಗಲಿಕ್ಕೇ ಒಂದು ತಿಂಗಳಾದರು ಬೇಕು ಅಂದರು ವೈದ್ಯರು. ಶಂಕರಪ್ಪ, ತಮ್ಮ ಮಗ ಸೀತಾರಾಮ ಈ ವರ್ಷ ನಿಭಾಯಿಸಲಿ ಅನ್ನುವ ಸಲಹೆ ಕೊಟ್ಟ. ಶಂಕರಪ್ಪನ ತಮ್ಮ ವೆಂಕಟ್ರಮಣಪ್ಪ, ಪಾಲು ತೆಗೆದುಕೊಂಡು ಬೇರೆ ಇದ್ದವ, ತಕರಾರು ತೆಗೆದ. ತಾನು ಅದೇ ಕುಟುಂಬದವ. ಆಸ್ತಿಯಲ್ಲಿ ಅಧಿಕಾರವಿರುವಂತೆ ಪಾರುಪತ್ಯಗಾರಿಕೆಯಲ್ಲೂ ಅಧಿಕಾರವಿದ್ದೇ ಇದೆ. ಈಗಂತೂ ಅಣ್ಣನಿಗೆ ಬರಲಾಗದಂತಾಗಿದ್ದಕ್ಕಲ್ಲವೆ ಸಮಸ್ಯೆ? ಹದಿನಾಕು ವರ್ಷದ ಅಪ್ರಾಯಸ್ಥ ಮಗನಿಗಿಂತ ಆ ಕೆಲಸವನ್ನು ತಾನೇ ನಿಭಾಯಿಸ್ತೇನೆ ಅಂತ ವಾದ ಮಂಡಿಸಿದ. ಹೊರಗಿನ ಹತ್ತಾರು ಊರುಗಳನ್ನು ಸುತ್ತಿ ಅನುಭವವಿದ್ದ ಚಾಲಾಕಿ ವೆಂಕಟ್ರಮಣಪ್ಪನಿಂದ ಒಂದಲ್ಲ ಒಂದು ಸಹಾಯ ಪಡೆದವರೆ ಆಗಿದ್ದರು ಊರಲ್ಲಿದ್ದವರು. ಬೆಂಬಲ ಸಿಕ್ಕಿ, ಈ ವರ್ಷ ಅವನೇ ಮಾಡಲಿ ಎನ್ನುವ ಅಭಿಪ್ರಾಯ ಬಂತು.

ರಥೋತ್ಸವದ ವಿಧಿಗಳೆಲ್ಲಾ ಒಂದೊಂದಾಗಿ ಸಾಂಗವಾಗಿ ಮುಗಿದವು. ಪಾರ್ವತಿ ಪರಮೇಶ್ವರರ ವಾಗ್ವಾದ ಮುಕ್ತಾಯವಾಯಿತು. ಪಾರುಪತ್ಯಗಾರ ದೇವದಾಸಿಯರು ಸೇವೆ ಸಲ್ಲಿಸುವ ಕ್ಷಣ ಬಂತು. ಇಬ್ಬರೂ ಗರ್ಭಗುಡಿ ಸೇರಿದ ಮೇಲೆ ಬಾಗಿಲು ಮುಚ್ಚಿಕೊಂಡ ವೆಂಕಟ್ರಮಣಪ್ಪ. ಇಬ್ಬರೂ ಹೊಸಬರು. ಅಲ್ಲಿ ಈವರೆಗೆ ನಡೆಸುತ್ತಿದ್ದ ವಿಧಿವಿಧಾನಗಳೇನು ಅಂತ ವೆಂಕಟ್ರಮಣಪ್ಪನಿಗೆ ಗೊತ್ತಿರಲಿಲ್ಲ. ಅದನ್ನು ಅಣ್ಣನಿಂದ ಕೇಳಲೂ ಹೋಗಿರಲಿಲ್ಲ. ಚಂಚಲಮ್ಮನಿಗೆ ತಾಯಿ ಅದನ್ನು ಹೇಳುವ ಅವಕಾಶವಿರಲಿಲ್ಲ. ವೆಂಕಟ್ರಮಣಪ್ಪ ಶುರು ಮಾಡಿದ. ತಾವೀಗ ಶಿವನ ಸೇವಕರು. ಶಿವ ರಣಭೂಮಿಯಲ್ಲಿ ಶತ್ರುಸಂಹಾರ ಮಾಡಿ ಉಗ್ರ ಮನಸ್ಥಿತಿಯಲ್ಲಿರತಾನೆ. ಹೀಗಾಗಿ ಸಾಂತ್ವನ ನೀಡುವ ಸೇವೆಯಾಗಬೇಕು ಇಲ್ಲಿ ಅಂತ ಉಪದೇಶಿಸಿದ. ತಮ್ಮಿಬ್ಬರಲ್ಲೂ ಈ ಕ್ಷಣದಲ್ಲಿ ದೇವಿ ಮತ್ತು ದೇವರ ಅಂಶ ಪ್ರವೇಶಿಸಿದೆ, ಶಿವನೆದುರು ಪ್ರತ್ಯೇಕತೆ ಎಂಬ ಭಾವ ಕೂಡದು ಅಂದವ ಅವಳಿಗೆ ಅರ್ಧ ನಿರ್ವಾಣಕ್ಕೆ ಹೋಗಲು ಹೇಳಿದ. ಕ್ಷಣ ಹಿಂಜರಿದ ಚಂಚಲಮ್ಮ, ಆಮೇಲೆ ಸಂಪ್ರದಾಯದಲ್ಲಿ ಅಪಚಾರವಾಗಕೂಡದು ಅನಿಸಿ ಸೆರಗು ಕೆಳಹಾಕಿ, ಕುಪ್ಪುಸ ತೆಗೆದಿಟ್ಟಳು. ಅರ್ಧಬೆತ್ತಲೆಯಲ್ಲಿ ಸಂಕೋಚದಿಂದ ಲಿಂಗದ ಪಾದದಲ್ಲಿ ಕಣ್ಣು ಕೀಲಿಸಿ ನಿಂತಳು. ಮಡಿಯುಟ್ಟು, ಅರ್ಧಬೆತ್ತಲೆಯಲ್ಲೆ ಇದ್ದ ವೆಂಕಟ್ರಮಣಪ್ಪ ಏನೋ ಸ್ತೋತ್ರ ಪಠಿಸುತ್ತಾ ಅಲ್ಲಿದ್ದ ಬಟ್ಟಲಿಂದ ಶ್ರೀಗಂಧವನ್ನು ಬೆರಳಲ್ಲಿ ತೆಗೆದು ಅವಳ ಸ್ತನಗಳಿಗೆ, ಉದರಕ್ಕೆ ಹಚ್ಚಿದ. ಹೂವಿನ ಎಸಳುಗಳನ್ನು ಅವಳ ನಾಭಿಗೆ ತಾಗಿಸಿ ಲಿಂಗದ ಬುಡದಲ್ಲಿ ಅರ್ಪಿಸಿದ. ಆಮೇಲೆ ತನ್ನ ಎರಡೂ ಹಸ್ತಗಳನ್ನು ಅವಳ ಎದೆಯ ಮೇಲಿರಿಸಿಕೊಂಡು ಸ್ವಲ್ಪ ಹೊತ್ತು ಧ್ಯಾನ ಮಾಡುತ್ತಿದ್ದು, ಇದು ನಿನಗೆ ಸಮರ್ಪಣೆ ಅಂತ ಉದ್ಗರಿಸಿ ಶಿವನಿಗೆ ಕೈಜೋಡಿಸಿದ.

ಅವಳು ಬಟ್ಟೆ ಹಾಕಿಕೊಂಡಮೇಲೆ ಇಬ್ಬರೂ ಹೊರಬಂದರು. ಮರುದಿನ ಪೂಜೆಯ ಸಮಯದಲ್ಲಿ ಅವಳೊಬ್ಬಳನ್ನೇ ಭೆಟ್ಟಿಯಾಗಿ, ಈಗ ಒಂದು ಹಂತದ ವಿಧಿಯನ್ನು ಸಾಂಗವಾಗಿ ಮುಗಿಸಿದ್ದಾಗಿದೆ. ಸಂಜೆ ಮನೆಗೆ ಬಂದು ಪ್ರಸಾದ ತಗೊಂಡು ಹೋಗು, ಪೂರ್ತಿಯಾಗತದೆ ಅಂದ. ಸಂಜೆ ಪಾರುಪತ್ಯಗಾರರ ಮನೆಯತ್ತ ಹೊರಟವಳಿಗೆ ತೋಟದ ದಾರಿಯಲ್ಲೆ ಸಿಕ್ಕ ವೆಂಕಟ್ರಮಣಪ್ಪ 'ಒಳ್ಳೇದಾಯ್ತು, ಪ್ರಸಾದಕ್ಕೆ ಬಂದೆ. ಇಲ್ಲೇ ತೋಟದ ಮನೇಲೆ ಇದೆ, ಮತ್ಯಾಕೆ ಮನೇವರೆಗೆ ಹೋಗೋದು?' ಅಂದ. ಚಂಚಲಮ್ಮ ಐಗಳ ಹತ್ತಿರ ಮರಳ ಮೇಲೆ ತಿದ್ದಿ, ಅಕ್ಷರ ಬರೆದು ಓದುವಷ್ಟು ಕಲಿತಿದ್ದಳು. ಸುಪ್ತಮನಸು ಹೋಗುವುದು ಬೇಡ ಅನ್ನುತ್ತ ಹಿಂದೇಟು ಹೊಡೆಯುತ್ತಿತ್ತು. ಹೋಗದಿದ್ದರೆ ಅಪಚಾರವಾದೀತೋ ಅನ್ನುವ ಆತಂಕದ್ದು ಮೇಲುಗೈಯಾಯಿತೋ ಅಥವಾ ಅವ್ಯಕ್ತವಾದೊಂದು ಆಸೆ ಸೆಳೆಯಿತೋ, ವೆಂಕಟ್ರಮಣಪ್ಪನ ಹಿಂದೆ ಹೋಗಿಯಾಗಿತ್ತು. ಅಲ್ಲಿ ಆತ ಮಿರುಗುವ ರೇಶ್ಮೆ ಸೀರೆಯೊಂದಿಗೆ, ಹಳೆಕಾಲದ ಬಂಗಾರದ, ದಪ್ಪ ಜಡೆಬಿಲ್ಲೆಯನ್ನು ಪ್ರಸಾದವಾಗಿ ಇಟ್ಟಿದ್ದ! ಆಯ್ತು... ಇದು ಮುಂದುವರಿಯಿತು. ಆದರೆ ಇದರ ಪರಿಣಾಮ ಕಾಣಿಸಿತ್ತು. ಅವಳಿಗೆ ಗೊತ್ತಾಗುವಾಗ ಆಗಲೆ ಎರಡು ತಿಂಗಳದ್ದಾಗಿತ್ತು ಗರ್ಭ. ವೆಂಕಟ್ರಮಣಪ್ಪ ಸಲಹೆ ಕೊಟ್ಟರೂ ತೆಗೆಸಿಕೊಳ್ಳಲು ಧೈರ್ಯ